**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 49/2024**

ಪ್ರಾ.ಸಾ. 16

ಚಾ.ಸಾ. 21

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 23.01.2026**

| | |
|---|---|
| ಸಾಕ್ಷಿದಾರರ ಹೆಸರು | ಇಮ್ರಾನ್ ಉಲ್ಲಾಖಾನ್.ಎಂ.ಎಸ್. |
| ತಂದೆಯ ಹೆಸರು | ಲೇಟ್ ಶಫೀರ್ ಉಲ್ಲಾಖಾನ್ |
| ವಯಸ್ಸು | 43 ವರ್ಷ |
| ಉದ್ಯೋಗ | ಸಿವಿಲ್ ಮುಖ್ಯ ಪೇದೆ, ಕೆಸ್ತೂರು ಪೊಲೀಸ್ ಠಾಣೆ |
| ವಾಸ | ಕೆಸ್ತೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು ದಿನಾಂಕ 03.11.2022 ರಿಂದ ಇಲ್ಲಿಯವರೆಗೆ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಸಿವಿಲ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

.

.2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 11.03.2023 ರಂದು ಕೆಸ್ತೂರು ಪೊಲೀಸ್ ಠಾಣೆಯಿಂದ ನಮ್ಮ ಎ ಎಸ್ ಐ, ಬಾಳಯ್ಯ ಚಾಸಾ.23 ರವರ ಜೊತೆ ನಾನು, ಪಿಸಿ 410 ಶಿವಪ್ರಸಾದ್ ರವರು ದುಂಡನಹಳ್ಳಿಯ ಪಿರ್ಯಾದಿ ಅಜಯ್.ಕೆ. ಚಾಸಾ.1 ರವರ ಮನೆಯ ಬಳಿ ಹೋದೆವು. ಅಲ್ಲಿ ಚಾಸಾ.23

ರವರು ಕೃತ್ಯ ನಡೆದ ಸ್ಥಳದ ಮಹಜರು ಮಾಡುವ ಸಲುವಾಗಿ ಪಂಚರಾದ ಅಶೋಕ ಮತ್ತು ಶಂಭು ರವರನ್ನು ಬರಮಾಡಿಕೊಂಡರು. ಅವರಿಗೆ ಪಂಚನಾಮೆ ಸಮಯದಲ್ಲಿ ಸಾಕ್ಷಿಗಳಾಗಿ ಹಾಜರು ಇರುವಂತೆ ಕೋರಿ ಕೊಂಡಾಗ ಅವರು ಒಪ್ಪಿ ನೊಟೀಸು ಪಡೆದರು. ಚಾಸಾ.1 ರವರು ಮನೆಯನ್ನು ತೋರಿಸಿ ಆರೋಪಿಗಳು ಮನೆ ಒಳಗೆ ನುಗ್ಗಿ ರೂಮಿನಲ್ಲಿದ್ದ ನನ್ನನ್ನು ಮತ್ತು ಗಾಯಾಳು ಚಾಸಾ.2 ಉಮೇಶರವರನ್ನು ಅವ್ಯಾಚ ಪದಗಳಿಂದ ಬೈದು, ಮನೆಯ ಹೊರಗೆ ಎಳೆದುಕೊಂಡು ಬಂದು, ಮನೆಯಿಂದ ವಾಯುವ್ಯ ದಿಕ್ಕಿಗೆ ಸುಮಾರು 70 ಅಡಿ ಅಂತರದಲ್ಲಿ ತುಮಕೂರು–ಮದ್ದೂರು ರಾಜ್ಯ ಹೆದ್ದಾರಿ ರಸ್ತೆಯಿಂದ ಗ್ರಾಮದ ಒಳಗೆ ಹೋಗುವ ರಸ್ತೆಗೆ ಕರೆದುಕೊಂಡು ಹೋಗಿ ಕೈಗಳಿಂದ ಹೊಡೆದು, ಅವರಲ್ಲಿ 1 ನೇ ಆರೋಪಿ ನಿಖಿಲ್ ಡ್ರ್ಯಾಗರ್ ನಿಂದ ಚಾಸಾ.2 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಎದೆಗೆ ಚುಚ್ಚಲು ಪ್ರಯತ್ನಿಸಿದಾಗ ಜಾಗ ಹಾಗೂ ಜಗಳ ಬಿಡಿಸಲು ಬಂದ ಚಾಸಾ.3 ಮತ್ತು ಚಾಸಾ.4 ರವರಿಗೆ ಕೂಡ ಡ್ರ್ಯಾಗರ್ ನಿಂದ ಹಲ್ಲೆ ಮಾಡಿದ ಜಾಗ ಮತ್ತು ಕೊಲೆ ಬೆದರಿಕೆ ಹಾಕಿದ ಜಾಗ ಎಂದು ತೋರಿಸಿದಾಗ, ಚಾಸಾ.23 ರವರು ಸದರಿ ಸ್ಥಳಗಳಲ್ಲಿ ಮಹಜರು ಮಾಡಿ, ಮಹಜರನ್ನು ನನಗೆ ಉಕ್ತಲೇಖನ ಕೊಟ್ಟು ಬರೆಸಿದರು. ನಾನು ಸದರಿ ಮಹಜರನ್ನು ಚಾಸಾ.23 ರವರ ಉಕ್ತಲೇಖನದಂತೆ ಬರೆದಿದ್ದೇನೆ. ಮಹಜರು ಸಮಯದಲ್ಲಿ ಚಾಸಾ.1 ರವರು 1 ನೇ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಡ್ರ್ಯಾಗರ್ ಎಂದು ಹೇಳಿ, ರಸ್ತೆಯಲ್ಲಿ ಮಹಜರು ಮಾಡಿದ ಜಾಗದಿಂದ ತೆಗೆದು ತೋರಿಸಿಕೊಟ್ಟರು. ಚಾಸಾ.2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದು ಎಂದು ಹೇಳಿದ ನೀಲಿ ಬಣ್ಣದ ಹರಿದ ಟೀಶರ್ಟ್ ಮತ್ತು ಚಾಸಾ.3 ರವರು ಕೃತ್ಯ ಸಮಯದಲ್ಲಿ ಧರಿಸಿದ್ದು ಎಂದು ಹೇಳಿದ ಹಸಿರು ಬಣ್ಣದ ಹರಿದ ಟೀಶರ್ಟ್ ಅನ್ನು ಚಾಸಾ.1 ರವರು ತನಿಖಾಧಿಕಾರಿಗೆ ನೀಡಿದರು. ಡ್ರ್ಯಾಗರ್ ಮತ್ತು ಟೀಶರ್ಟ್ ಗಳಲ್ಲಿ ರಕ್ತದ ಕಲೆ ಇತ್ತು. ಆ ಮೂರು ವಸ್ತುಗಳನ್ನು ತನಿಖಾಧಿಕಾರಿಗಳು ಪ್ರತ್ಯೇಕ ಪ್ರತ್ಯೇಕ ಬಿಳಿಯ ಬಟ್ಟೆಯ ಚೀಲಗಳಲ್ಲಿ ಹಾಕಿ ಮೊಹರು ಮಾಡಿದರು. KCR ಅಕ್ಷರದಿಂದ ಮೊಹರು ಒತ್ತಿದರು. ಸದರಿ ಚೀಲಗಳಿಗೆ ಬಿಳಿ ಚೀಟಿ ಅಂಟಿಸಿ, ಅದರಲ್ಲಿ ವಸ್ತುಗಳ ಹೆಸರು ನಮೂದಿಸಿ, ಸಾಕ್ಷಿ ಮತ್ತು ತನಿಖಾಧಿಕಾರಿಗಳು ಸಹಿ ಮಾಡಿದರು. ಸದರಿ ಮೂರು ವಸ್ತುಗಳನ್ನು

ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮು.ಮಾ.1 ರಿಂದ ಮು.ಮಾ.3 ಅನ್ನು ನೋಡಿ ಗುರುತಿಸಿರುತ್ತಾರೆ. ಮಹಜರು ಕಾಲಕ್ಕೆ ಶಿವಪ್ರಸಾದ್ ರವರ ಕೈಯಲ್ಲಿ ಫೊಟೋ ತೆಗೆಸಿದ್ದಾರೆ. ಫೊಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.3 ರ 10 ಫೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ನಿಪಿ.2 ರಂತೆ ಸಂಜೆ 5.20 ರಿಂದ 6.45 ಗಂಟೆವರೆಗೆ ಮಾಡಿದ್ದಾರೆ. ನಾನು ಸದರಿ ಮಹಜರನ್ನು ಬರೆದ ಬಗ್ಗೆ ನನ್ನ ಸಹಿ ಕೂಡ ಪಡೆದಿದ್ದಾರೆ. ಸಾಕ್ಷಿ ನಿಪಿ.2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಡಿ ಎಂದು ಗುರುತಿಸಲಾಯಿತು.

.

.3. ದಿನಾಂಕ 14.06.2023 ರಂದು ಪಿ ಎಸ್ ಐ ನವೀನ್ ಕುಮಾರ್ ಚಾಸಾ.24 ರವರು 2 ನೇ ಆರೋಪಿ ಅನೂಷ್.ಡಿ.ವಿ. ಕಡೆಯಿಂದ ಕೃತ್ಯ ನಡೆದ ಸ್ಥಳವನ್ನು ಗುರುತಿಸಿ ಮಹಜರು ಮಾಡಲು ನಮ್ಮನ್ನು ಸಂಜೆ 5.00 ಗಂಟೆಗೆ ಕರೆದುಕೊಂಡು ಹೋದರು. ಠಾಣೆಗೆ ಇಬ್ಬರು ಸಾಕ್ಷಿಗಳನ್ನೂ ಕೂಡ ಕರೆಸಿಕೊಂಡರು. ಬಳಿಕ ನಾವು ಅಂದರೆ ಚಾಸಾ.24, ನಾನು, 2 ನೇ ಆರೋಪಿ ಅನೂಷ್, ಸಾಕ್ಷಿಗಳು ಇಲಾಖಾ ಜೀಪು ಕೆಎ–11–ಜಿ–335 ರಲ್ಲಿ ಠಾಣೆಯಿಂದ ಹೊರಟು ದುಂಡನಹಳ್ಳಿ ಚಾಸಾ.1 ರವರ ಮನೆಯ ಬಳಿ ಹೋದೆವು. ನಮ್ಮನ್ನು ಎರಡನೇ ಆರೋಪಿ ಆ ಸ್ಥಳಕ್ಕೆ ಕರೆದುಕೊಂಡು ಹೋದ. ಅಲ್ಲಿ 2 ನೇ ಆರೋಪಿ ಚಾಸಾ.1 ರವರ ಮನೆಯನ್ನು ತೋರಿಸಿ, ಇದೇ ಮನೆಯಿಂದ ಚಾಸಾ.1 ಮತ್ತು ಚಾಸಾ.2 ರವರನ್ನು ಎಳೆದು ತಂದ ಮನೆ ಎಂದು ಹೇಳಿದ. ಅಲ್ಲಿಂದ ವಾಯುವ್ಯ ದಕ್ಕಿಗೆ 70 ಅಡಿ ದೂರದ ರಸ್ತೆಯ ಬದಿಗೆ ಕರೆದುಕೊಂಡು ಹೋಗಿ ಈ ಜಾಗದಲ್ಲಿ, ಚಾಸಾ.1 ರಿಂದ ಚಾಸಾ.4 ರವರಿಗೆ ಹಲ್ಲೆ ಮಾಡಿದ ಜಾಗ ಎಂದು ತೋರಿಸಿದ. ಆ ಎರಡು ಸ್ಥಳಗಳಿಗೆ ಸೇರಿಸಿ ತನಿಖಾಧಿಕಾರಿಗಳು ಮಹಜರು ಮಾಡಿ ಮಹಜರನ್ನು ನನಗೆ ಉಕ್ತಲೇಖನ ಕೊಟ್ಟು ಬರೆಸಿದರು. ಸಾಕ್ಷಿಗಳ ಸಮಕ್ಷಮ ಸಂಜೆ 5.10 ರಿಂದ 6.40 ಗಂಟೆವರೆಗೆ ಮಹಜರು ಮಾಡಿದರು. ನಾನು ಸದರಿ ಮಹಜರನ್ನು ಬರೆದ ಬಗ್ಗೆ ಸಹಿ ಮಾಡಿದ್ದೇನೆ. ನಿಪಿ.10 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.10 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಶಿವಪ್ರಸಾದ್ ರವರ

ಮೂಲಕ ನಿಪಿ.11 ಮತ್ತು ನಿಪಿ.12 ರಂತೆ ಫೋಟೋ ತೆಗೆಸಿದ್ದಾರೆ. ನಿಪಿ.10 ರ ಕಾಲಕ್ಕೆ ಹಾಜರು ಇದ್ದ 2 ನೇ ಆರೋಪಿಯನ್ನು ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿತರ ಪರ ಶ್ರೀ ಪಿ ಎನ್ ವಕೀಲರಿಂದಃ**

1. ನಿಪಿ.2 ಮಹಜರು ಬರೆಯಲು ನನ್ನನ್ನು ಚಾಸಾ.23 ನಿಯೋಜಿಸಿದ್ದರು, ನಿಪಿ.10 ಮಹಜರು ಬರೆಯಲು ಚಾಸಾ.24 ನಿಯೋಜಸಿದ್ದರು. ನನಗೆ ಮೌಖಿಕ ಆದೇಶದ ಮೇಲೆ ನಿಯೋಜನೆ ಮಾಡಿದ್ದಾರೆ. ನಿಪಿ.2 ರ ಸಾಕ್ಷಿಗಳು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು. ಮಹಜರು ಸ್ಥಳದ ಅಕ್ಕ ಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿಯಲ್ಲ. ಮಹಜರು ಸ್ಥಳಗಳಲ್ಲಿ ಮನೆಯ ಪೂರ್ವಕ್ಕೆ ಚಾಸಾ.1 ರವರ ಜಮೀನು, ಪಶ್ಚಿಮಕ್ಕೆ ತುಮಕೂರು-ಮದ್ದೂರು ರಾಜ್ಯ ಹೆದ್ದಾರಿ ರಸ್ತೆಯಿಂದ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ಪುಟ್ಟಸ್ವಾಮಿಯವರ ಜಮೀನು ಮತ್ತು ದಕ್ಷಿಣಕ್ಕೆ ಚಾಸಾ.1 ರವರ ಜಮೀನು ಮತ್ತು ರಾಮಚಂದ್ರಯ್ಯನವರ ಜಮೀನು. ಹಲ್ಲೆ ಮಾಡಿದ ಸ್ಥಳದ ಉತ್ತರ-ದಕ್ಷಿಣಕ್ಕೆ ತುಮಕೂರು-ಮದ್ದೂರು ರಾಜ್ಯ ಹೆದ್ದಾರಿ ರಸ್ತೆಯಿಂದ ಗ್ರಾಮಕ್ಕೆ ಹೋಗುವ ರಸ್ತೆ, ಪೂರ್ವಕ್ಕೆ ಪುಟ್ಟಸ್ವಾಮಿಯವರ ಜಮೀನು, ಪಶ್ಚಿಮಕ್ಕೆ ನಂದೀಶರವರ ಜಮೀನು ಇದೆ. ಚಾಸಾ.1 ರವರು ಮು.ಮಾ.1 ರಿಂದ ಮು.ಮಾ.3 ಅನ್ನು ಮನೆಯ ಹತ್ತಿರ ಎತ್ತಿ ಇಟ್ಟಿದ್ದೆ ಎಂದು ಹೇಳಿ ತಂದು ಕೊಟ್ಟರು. ಮಹಜರು ಸ್ಥಳಕ್ಕೆ ಹೋಗುವಾಗ ಚಾಸಾ.23 ಮತ್ತು ಚಾಸಾ.24 ರವರು ಡೈರಿಯಲ್ಲಿ ನಮೂದು ಮಾಡಿರಬಹುದು.

2. ನಾನು ಯಾವುದೇ ಮಹಜರಿಗೆ ಹೋಗಿಲ್ಲ, ಠಾಣೆಯಲ್ಲಿ ಕುಳಿತು ಮಹಜರು ಬರೆದಿದ್ದೇನೆಂದರೆ ಸರಿಯಲ್ಲ. ಹಿರಿಯ ಅಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗಳು ಮಹಜರು ಕಾಲಕ್ಕೆ ಹಾಜರು ಇರಲಿಲ್ಲ. ಅವರೂ ಕೂಡ ಠಾಣೆಯಲ್ಲೇ ಸಹಿ ಮಾಡಿದ್ದು ಎಂದರೆ ಸರಿಯಲ್ಲ. 2 ನೇ ಆರೋಪಿ ಕೃತ್ಯ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ನಮಗೆ ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ.10 ಮಹಜರನ್ನು 2 ನೇ

ಆರೋಪಿ ತೋರಿಸಿದಂತೆ ಮಾಡಿದ್ದು ಅಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ ಮು.ಮಾ.3 ಅನ್ನು ಚಾಸಾ.1 ರವರು ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.